## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.

ಸಿ.ಸಿ. 756/2025

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರುಃ** |
|---|---|---|
| ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆ | | ಸಂತೋಷ್ ಬಿ. ಮತ್ತು ಇತರರು |

**:: ದೋಷಾರೋಪಣೆ ::**

**ಶ್ರೀಮತಿ. ಎಂ. ಕಾವ್ಯಶ್ರೀ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೊಳ್ಳೇಗಾಲ, ಆದ ನಾನು ನಿಮ್ಮ ಮೇಲೆ ಅಂದರೆಃ**

1. ಸಂತೋಷ್ ಬಿ. ಬಿನ್ ಬಸವಯ್ಯ, 33 ವರ್ಷ,
   **ವಿಳಾಸಃ** ಆಲಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು.
2. ತಿಮ್ಮ @ತಿಮ್ಮರಾಜು ಬಿನ್ ಲೇಟ್ ಸೊಮಣ್ಣ, 42 ವರ್ಷ,
   **ವಿಳಾಸಃ** ಸಿದ್ದರಾಮನಹುಂಡಿ ಗ್ರಾಮ, ವರುಣ ಹೋಬಳಿ,
   ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.
3. ಶಂಕರ ಬಿನ್ ಲೇಟ್ ಶಿವಮಾದಯ್ಯ, 32 ವರ್ಷ,
   **ವಿಳಾಸಃ** ಹೊಸನರೀಪುರ ಗ್ರಾಮ, ಸೋಸಲೆ ಹೋಬಳಿ,
   ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.
4. ಶೇಖರ್ @ಲಿಂಗರಾಜು ಎಲ್. ಬಿನ್ ಲಿಂಗಯ್ಯ @ನಿಂಗಯ್ಯ , 43 ವರ್ಷ,
   **ವಿಳಾಸಃ** ತಿಮ್ಮಾರಾಜೀಪುರ ಗ್ರಾಮ, ಕೊಳ್ಳೇಗಾಲ ತಾಲ್ಲೂಕು.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕಃ 20.12.2024 ರಂದು ರಾತ್ರಿ ಸುಮಾರು 11-00 ಗಂಟೆಯ ಸಮಯದಲ್ಲಿ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ತಿಮ್ಮರಾಜೀಪುರ ಗ್ರಾಮದ ಸಾಕ್ಷಿ-2 ರವರ ಅಜ್ಜಿಯು ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಸಾಕ್ಷಿ-2 ರವರ ಮನೆಯ ಮುಂದೆ ಸಾಕ್ಷಿ-1 ರಿಂದ 5 ರವರು ಮತ್ತು ಆರೋಪಿತರು ಸೇರಿದ್ದು, ಆ ಸಮಯದಲ್ಲಿ ಸಾಕ್ಷಿ-1 ರವರು ಸಾಕ್ಷಿ-2 ರವರ ಭುಜದ ಮೇಲೆ ಕೈ ಇಟ್ಟು ತಮಾಷೆ ಮಾಡುತ್ತಿದ್ದಾಗ ಆರೋಪಿ-1 ರವರು ಈ ಸಮಯದಲ್ಲಿ ತಮಾಷೆ ಮಾಡುತ್ತಿದ್ದಿಯಾ ಬೋಳಿಮಗನೇ ನಿನ್ನ ವಯಸ್ಸೇನು ಮಹೇಶನ ವಯಸ್ಸೇನು ಎಂದು ಕೆಟ್ಟ ಪದಗಳಿಂದ ಬೈದಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 352 ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ನಿಮ್ಮ ಪೈಕಿ ಆರೋಪಿ–2 ಮತ್ತು 3 ರವರು ಕೈಗಳಿಂದ ಸಾಕ್ಷಿ–1 ರವರ ಮೈಕೈಗೆ ಹಾಗೂ ಕಿಬ್ಬೊಟ್ಟೆಗೆ ಹೊಡೆದು ನೋವುಂಟು ಮಾಡಿರುತ್ತೀರಿ, ಆ ಮೂಲಕ ಭಾ.ನ್ಯಾ.ಸಂ.ಕಲಂ 115(2) ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ನಿಮ್ಮ ಪೈಕಿ ಆರೋಪಿ–1 ರವರು ದೊಣ್ಣೆಯಿಂದ ಸಾಕ್ಷಿ–1 ರವರ ಎಡಗಣ್ಣಿನ ಹತ್ತೀರ ಹೊಡೆದು ರಕ್ತಗಾಯ ಪಡಿಸಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 118(1) ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ನಿಮ್ಮ ಪೈಕಿ ಆರೋಪಿ–4 ರವರು ನೀನು ನಮ್ಮ ಮೇಲೆ ಕಂಪ್ಲೆಂಟ್ ಕೊಟ್ಟು ಏನು ಮಾಡೊಕಾಗುತ್ತೆ ನಮ್ಮ ಮೇಲೆ ಕಂಪ್ಲೆಂಟ್ ಕೊಟ್ಟರೆ ನಿನ್ನನ್ನು ಮುಗಿಸುವುದಾಗಿ ಸಾಕ್ಷಿ–1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 351(2) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

09ನೇ ಡಿಸೆಂಬರ್ ಮಾಹೆ 2025.

**( ಎಂ. ಕಾವ್ಯಶ್ರೀ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.

## ಸಿ.ಸಿ.ನಂ. 756/2025

| ಫಿರ್ಯಾದುದಾರರು | ವಿರುದ್ಧ | ಆರೋಪಿ-4 |
|---|---|---|
| ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆ | | ಶೇಖರ್ @ ಲಿಂಗರಾಜು.ಎಲ್ |

:: ಆರೋಪಿ ಹೇಳಿಕೆ ::

ಪ್ರಶ್ನೆ :1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರ :

ಪ್ರಶ್ನೆ :2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೇ?

ಉತ್ತರ :

**(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ಹೇಳಿದ ನಂತರ ಆರೋಪಿ ಅದನ್ನು ಅರ್ಥ ಮಾಡಿಕೊಂಡ ನಂತರ ನೀಡಿದ ಉತ್ತರಗಳನ್ನು ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ)**

ದಿನಾಂಕ: 09.12.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.